# Prajavani

## Save the Doctors

**Date: 27/08/2013 | Edition: Bangalore | Page: 2 | Source: Bureau | Clip size (cm): W: 13 H: 22**

**Clip: 1 of 1**





ಭಾರತೀಯ ವೈದ್ಯರ ಸಂಘವು ಸೋಮವಾರ ನಗರದಲ್ಲಿ ಏರ್ಪಡಿಸಿದ್ದ 'ವೈದ್ಯರನ್ನು ಉಳಿಸಿ' ಕಾಲ್ನಡಿಗೆ ಜಾಥಾದಲ್ಲಿ ಭಾಗವಹಿಸಿದ್ದ ವೈದ್ಯಕೀಯ ವಿದ್ಯಾರ್ಥಿಗಳು ಪೊರಕೆ ಹಿಡಿದು ಪ್ರತಿಭಟಿಸಿದರು -ಪ್ರಜಾವಾಣಿ ಚಿತ್ರ

### ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ಏರಿಕೆಗೆ ಒತ್ತಾಯ

# ವಿದ್ಯಾರ್ಥಿಗಳಿಂದ ಪೊರಕೆ ಪ್ರತಿಭಟನೆ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಪದವಿ ಹಾಗೂ ಸ್ನಾತಕೋತ್ತರ ಪದವಿಯ ವೈದ್ಯಕೀಯ ಸೀಟುಗಳನ್ನು ಸಮನಾಗಿಸಬೇಕೆಂದು ಕೇಂದ್ರ ಆರೋಗ್ಯ ಸಚಿವಾಲಯವನ್ನು ಒತ್ತಾಯಿಸಿ ವೈದ್ಯಕೀಯ ವಿದ್ಯಾರ್ಥಿಗಳು ಸೋಮವಾರ ನಗರದಲ್ಲಿ ಕಾಲ್ನಡಿಗೆ ಜಾಥಾ ನಡೆಸಿದರು.

ಭಾರತೀಯ ವೈದ್ಯರ ಸಂಘವು ಏರ್ಪಡಿಸಿದ್ದ 'ವೈದ್ಯರನ್ನು ಉಳಿಸಿ' ಜಾಥಾದಲ್ಲಿ ದೈನಂದಿನ ಬಿಳಿಯ ಕೋಟ್ ಜತೆಗೆ ಕಪ್ಪು ಪಟ್ಟಿಯನ್ನು ಧರಿಸಿದ್ದ ವಿದ್ಯಾರ್ಥಿಗಳು ಮಣಿಪಾಲ್ ಸೆಂಟರ್‌ನಿಂದ ಬಾಲಭವನ ಮಾರ್ಗವಾಗಿ ಕಬ್ಬನ್ ಉದ್ಯಾನದವರೆಗೆ ನಡೆದ ಕಾಲ್ನಡಿಗೆ ಜಾಥಾದಲ್ಲಿ ನೂರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

'ವೈದ್ಯರನ್ನು ಉಳಿಸಿ' ಚಳವಳಿಯ ರಾಷ್ಟ್ರಮಟ್ಟದ ಸಂಚಾಲಕ ಡಾ. ನವ್‌ನೀತ್ ಮೊಟ್ರೇಜಾ ಮಾತನಾಡಿ, 'ದೇಶದಲ್ಲಿ ವೈದ್ಯಕೀಯ ಪದವಿ ಸೀಟುಗಳು 45,000 ಇವೆ. ಆದರೆ, ಸ್ನಾತಕೋತ್ತರ ಪದವಿ ಸೀಟುಗಳು 12,000 ಮಾತ್ರ ಇವೆ. ಇದರಿಂದ, ಉನ್ನತ ವ್ಯಾಸಂಗ ಅಧ್ಯಯನಕ್ಕೆ ತೊಡಕಾಗಿ, ದೇಶದಲ್ಲಿ ತಜ್ಞ ವೈದ್ಯರ ಕೊರತೆ ಉಂಟಾಗಿದೆ. ಇದನ್ನು ಸರಿದೂಗಿಸಲು ಸ್ನಾತಕ ಪದವಿಯ ಸೀಟುಗಳನ್ನು ಹೆಚ್ಚಿಸಬೇಕು' ಎಂದರು.

'ಒಂದು ವರ್ಷ ಗ್ರಾಮೀಣ ಪ್ರದೇಶದ ಸೇವೆಯನ್ನು ಸ್ನಾತಕೋತ್ತರ ಪದವಿಯಲ್ಲಿಯೇ ಸೇರಿಸಬೇಕು. ಇದರಿಂದ, ಗ್ರಾಮೀಣ ಜನರಿಗೆ ಉತ್ತಮವಾದ ಚಿಕಿತ್ಸೆಯನ್ನು ನೀಡಲು ಸಹಾಯಕವಾಗುತ್ತದೆ' ಎಂದು ಒತ್ತಾಯಿಸಿದರು.

'ಐದು ವರ್ಷಗಳಿಂದ ನಮ್ಮ ಬೇಡಿಕೆಯನ್ನು ಸಲ್ಲಿಸುತ್ತಿದ್ದೇವೆ. ಈಗಲಾದರೂ ಕೇಂದ್ರ ಸರ್ಕಾರ ಇದರ ಮಹತ್ವವನ್ನು ಮನಗಂಡು ಈಡೇರಿಸಬೇಕು' ಎಂದು ಒತ್ತಾಯಿಸಿದರು.

'ವೈದ್ಯಕೀಯ ಪದವಿ ಮುಗಿಸಿ, ವಿಶೇಷ ತಜ್ಞರಾಗಲು ಸ್ನಾತಕೋತ್ತರ ಪದವಿ ಅಧ್ಯಯನ ಅನಿವಾರ್ಯವಾಗಿದೆ. ಆದರೆ, ಸ್ನಾತಕೋತ್ತರ ಪದವಿ ಸೀಟುಗಳ ಸಂಖ್ಯೆ ಕಡಿಮೆಯಿರುವುದರಿಂದ ಎಲ್ಲರಿಗೂ ಅಧ್ಯಯನ ಮಾಡುವ ಅವಕಾಶವು ದೊರೆಯುವುದಿಲ್ಲ. ಇದರಿಂದ, ಸ್ನಾತಕೋತ್ತರ ಪದವಿಯ ಸೀಟುಗಳನ್ನು ಹೆಚ್ಚಿಸಬೇಕು' ಎಂದು ವೈದ್ಯಕೀಯ ವಿದ್ಯಾರ್ಥಿನಿ ಸುಕನ್ಯಾ ಹೇಳಿದರು.

'ಸ್ನಾತಕೋತ್ತರ ಪದವಿಯ ಕೊರತೆಯಿಂದ ವಿಶೇಷ ತಜ್ಞರ ಕೊರತೆ ನಮ್ಮ ದೇಶದಲ್ಲಿ ಉಂಟಾಗಿದೆ. ಇದರಿಂದ, ವಿಶೇಷ ಕಾಯಿಲೆಗಳಿಗೆ ಚಿಕಿತ್ಸೆ ದೊರೆಯುವುದು ದುರ್ಲಭವಾಗಿದೆ' ಎಂದು ವೈದ್ಯಕೀಯ ವಿದ್ಯಾರ್ಥಿ ಅವಿನಾಶ್ ಹೇಳಿದರು.